ಸಂಪುಟ Volume 87 | ಸಂಚಿಕೆ Issue 283 | ಪುಟ Pages 16+4
epaper.samyukthakarnataka.com
ಬಾಗಲಕೋಟೆ Bagalkot | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere | ಮಂಗಳೂರು Mangaluru
ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ...

# ಸಂಯುಕ್ತ ಕರ್ನಾಟಕ

SAMYUKTA KARNATAKA

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

ಕಾರ್ಕಳ ಬಳಿ ಭೀಕರ ಅಪಘಾತ 11 ಮಂದಿ ಸಾವು ಪುಟ–11 ರವಿವಾರ 16 ಫೆಬ್ರವರಿ 2020 ₹ 5-00



# ಪದವಿ ಪರೀಕ್ಷೆಯಲ್ಲಿ ಸಾಧನೆ

**ವಿಜಯಪುರ** : ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ 2018–19 ನೇ ಸಾಲಿನಲ್ಲಿ ನಡೆಸಿದ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಯಲ್ಲಿ ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಅನೇಕ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಅನೇಕ ರ್‍ಯಾಂಕ್ ಗಿಟ್ಟಿಸಿಕೊಳ್ಳುವ ಮೂಲಕ ಉನ್ನತ ಸಾಧನೆ ತೋರಿದ್ದಾರೆ.

ಸ್ನಾತಕೋತ್ತರ ವಿಭಾಗದ ಎಂಎಸ್‌ಸಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ನಂದಾ ಮೇಲಿನಮನಿ ವಿಶ್ವವಿದ್ಯಾಲಯಕ್ಕೆ ಎರಡನೇಯ ರ್‍ಯಾಂಕ್, ಎಂಎಸ್‌ಸಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಸೌಮ್ಯಾ ಹಿರೇಮಠ ವಿಶ್ವವಿದ್ಯಾಲಯಕ್ಕೆ ಮೂರನೇಯ ರ್‍ಯಾಂಕ್ ಹಾಗೂ ಎಂಎಸ್‌ಸಿ ಭೌತಶಾಸ್ತ್ರ ವಿಭಾಗದಲ್ಲಿ ಅಕ್ಷತಾ ಕುಡಚಿ ಎರಡನೇಯ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಅದೇ ರೀತಿಯಾಗಿ ಬಿಎಸ್‌ಸಿಯಲ್ಲಿ ಕುಂಜರಾಣಿ ತೇಲಿ ವಿಶ್ವವಿದ್ಯಾಲಯಕ್ಕೆ 9 ನೇ ರ್‍ಯಾಂಕ್ ಪಡೆದುಕೊಂಡು ಉನ್ನತ ಸಾಧನೆ ತೋರಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಎಂ.ಬಿ. ಪಾಟೀಲ, ಪ್ರಾಚಾರ್ಯ ಡಾ.ಎ.ಎಸ್. ಪೂಜಾರ ಮೊದಲಾದವರು ಹರ್ಷ ವ್ಯಕ್ತಪಡಿಸಿದ್ದಾರೆ.

Scanned with CamScanner

ಕನ್ನಡಪ್ರಭ
ಸೋಮವಾರ 17.2.2020

ಸಣ್ ಸುದ್ದಿ

# ಬಿಎಲ್‌ಡಿಇ ಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ






**ವಿಜಯಪುರ:** ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ ನಡೆದ 2018-19ನೇ ಸಾಲಿನಲ್ಲಿ ನಡೆಸಿದ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಯಲ್ಲಿ ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉನ್ನತ ಸಾಧನೆ ತೋರಿದ್ದಾರೆ. ಸ್ನಾತಕೋತ್ತರ ವಿಭಾಗದ ಎಂಎಸ್‌ಸಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ನಂದಾ ಮೇಲಿನಮನಿ ವಿಶ್ವವಿದ್ಯಾಲಯಕ್ಕೆ ಎರಡನೇ ರ್‍ಯಾಂಕ್, ಎಂಎಸ್‌ಸಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಸೌಮ್ಯಾ ಹಿರೇಮಠ ವಿಶ್ವವಿದ್ಯಾಲಯಕ್ಕೆ ಮೂರನೇ ರ್‍ಯಾಂಕ್ ಹಾಗೂ ಎಂಎಸ್‌ಸಿ ಭೌತಶಾಸ್ತ್ರ ವಿಭಾಗದಲ್ಲಿ ಅಕ್ಷತಾ ಕುಡಚಿ ಎರಡನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಅದೇ ತೆರನಾಗಿ ಬಿಎಸ್ಸಿಯಲ್ಲಿ ಕುಂಜರಾಣಿ ತೇಲಿ ವಿಶ್ವವಿದ್ಯಾಲಯಕ್ಕೆ 9ನೇ ರ್‍ಯಾಂಕ್ ಪಡೆದುಕೊಂಡು ಉನ್ನತ ಸಾಧನೆ ತೋರಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಎಂ.ಬಿ. ಪಾಟೀಲ, ಪ್ರಾಚಾರ್ಯ ಡಾ.ಎ.ಎಸ್. ಪೂಜಾರ ಅಭಿನಂದಿಸಿದ್ದಾರೆ.

Scanned with CamScanner

ವಿಜಯ ಕರ್ನಾಟಕ

ದಿ: 19/02/2020

## ವಿಜಯಪುರದಲ್ಲಿ ವಿಜ್ಞಾನ, ತಂತ್ರಜ್ಞಾನ ರಾಷ್ಟ್ರೀಯ ಕನ್ನಡ ಸಮ್ಮೇಳನ ಆರಂಭ

# ತಂತ್ರಜ್ಞಾನದಿಂದ ಸಂಪತ್ತು

■ **ವಿಕ ಸುದ್ದಿಲೋಕ** ವಿಜಯಪುರ

ತಂತ್ರಜ್ಞಾನದಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳು ಆಗುತ್ತಿದ್ದು, ಇದರ ಸಮನ್ವಯ ಸಾಧಿಸಲು ಅಂತರ್ ಜ್ಞಾನವನ್ನು ಹೆಚ್ಚು ಮಾಡಿಕೊಳ್ಳಬೇಕು ಎಂದು ಕಂಪ್ಯೂಟರ್ ತಜ್ಞರೂ ಆಗಿರುವ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ ಹೇಳಿದರು.

**ಅಂತರ್‌ಜ್ಞಾನ ಸಮನ್ವಯಕ್ಕೆ ವಿಶ್ರಾಂತ ಕುಲಪತಿ ಚಿದಾನಂದಗೌಡ ಸಲಹೆ**



**ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್‌ನಲ್ಲಿ ಏರ್ಪಡಿಸಿದ ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಉದ್ಘಾಟಿಸಿ ಮಾತನಾಡಿದರು.**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್ ಸಹಯೋಗದಲ್ಲಿ ನಗರದ ಬಿಎಲ್‌ಡಿಇ ಸಂಸ್ಥೆಯಲ್ಲಿ ಆಯೋಜಿಸಿರುವ ಎರಡು ದಿನಗಳ ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಮಂಗಳವಾರ ಉದ್ಘಾಟಿಸಿದ ಅವರು, ತಂತ್ರಜ್ಞಾನದಿಂದ ಮಾನವ ಕುಲಕ್ಕೆ ಸಾಕಷ್ಟು ಅನುಕೂಲಗಳಾಗಿವೆ. ಇದರಿಂದ ಸಂಪತ್ತಿನ ವೃದ್ಧಿಯೂ ಯಥೇಚ್ಛವಾಗಿ ಆಗಿದೆ. ಕೆಲವೊಮ್ಮೆ ತೊಂದರೆಗಳೂ ಆಗುತ್ತಿದ್ದು, ತಂತ್ರಜ್ಞಾನದ ಜತೆಗೆ ಅಂತರ್‌ಜ್ಞಾನ ಹೆಚ್ಚು ಮಾಡಿಕೊಂಡರೆ ಇಂಥ ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಇದು ತಂತ್ರಜ್ಞಾನ ಯುಗ. ಜ್ಞಾನ ಯುಗವೂ ಹೌದು. ಜ್ಞಾನಕ್ಕೆ ತಂತ್ರಜ್ಞಾನ ಮಿಳಿತವಾದರೆ ಏನೆಲ್ಲಾ ಸಾಧನೆ ಮಾಡಬಹುದು ಎನ್ನುವುದನ್ನು ಕಣ್ಣ ಮುಂದೆಯೇ ನೋಡುತ್ತಿದ್ದೇವೆ. ಒಂದು ಕಬ್ಬಿಣದ ತುಂಡನ್ನು 5 ರೂ.ಗೆ ಖರೀದಿಸಿ ಕುದುರೆಲಾಳ ಮಾಡಿದರೆ 50 ರೂ. ಆದಾಯ ಮಾಡಬಹುದು. ಅದನ್ನೇ ಸೂಜಿಯಾಗಿಸಿದರೆ 50 ಸಾವಿರ ರೂ. ಆದಾಯ ಸಿಗಬಹುದು. ಅದೇ ವಾಚಿನ ಸ್ಪ್ರಿಂಗ್ ಆಗಿ ರೂಪಿಸಿದರೆ 5 ಲಕ್ಷ ರೂ. ಆದಾಯ ಪಡೆಯಬಹುದು. ಅದನ್ನು ನಾವೀಗ ನೋಡುತ್ತಿದ್ದೇವೆ. ಅದೇ ರೀತಿ ಪಿಯುಸಿ ಓದುವ ವಿದ್ಯಾರ್ಥಿಗೆ ಸೂಕ್ತ ಶಿಕ್ಷಣ, ಮಾರ್ಗದರ್ಶನ ನೀಡಿದರೆ ಅತನೂ ಒಳ್ಳೆಯ ಹುದ್ದೆ ಪಡೆದು ಆದಾಯ ತರಬಲ್ಲವನಾಗುತ್ತಾನೆ. »III

> **ಶತಮಾನಗಳ ಹಿಂದೆಯೇ ಚಿಕಾಗೋದಲ್ಲಿ ಭಾಷಣ ಮಾಡಿದ್ದ ಸ್ವಾಮಿವಿವೇಕಾನಂದರು ವಿಜ್ಞಾನದ ಜತೆಗೆ ಅಂತರ್‌ಜ್ಞಾನದ ಕುರಿತು ಹೇಳಿದ್ದರು. ನದಿಗಳು ಬೇರೆಯಾಗಿ ಹುಟ್ಟಿ ಕೊನೆಗೆ ಸಮುದ್ರ ಸೇರುತ್ತವೆ. ಧರ್ಮಗಳು ಕೂಡ ಹಾಗೆಯೇ. ವಿಜ್ಞಾನ, ತಂತ್ರಜ್ಞಾನ ತಳಹದಿ ಮೇಲೆ ಮಾನವ ಪ್ರಗತಿ ಕಂಡರೂ ಅಂತರ್‌ಜ್ಞಾನ ಬೆಳೆಸಿಕೊಂಡು ಸಂಪತ್ತು ಸದ್ವಿನಿಯೋಗ ಮಾಡಿಕೊಳ್ಳಬೇಕು.**
> **-ಡಾ.ಕೆ.ಚಿದಾನಂದಗೌಡ,**
> ವಿಶ್ರಾಂತ ಕುಲಪತಿ

### ಸಮ್ಮೇಳನದಲ್ಲಿ ಇಂದು

**ವಿಜ್ಞಾನ ಸಮ್ಮೇಳನದಲ್ಲಿ ಇಂದು ಫೆ. 19ರಂದು ಬೆಳಗ್ಗೆ 10ಕ್ಕೆ ನಡೆಯುವ ತಾಂತ್ರಿಕ ಅಧಿವೇಶನದಲ್ಲಿ ಖ್ಯಾತ ವಿಜ್ಞಾನಿ ಡಾ.ಕೃಷ್ಣ ಪ್ರಸಾದ್ 'ನ್ಯಾನೋ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು' ಕುರಿತಾಗಿ, 11ಕ್ಕೆ ಡಾ.ಎಂ.ವಿ.ರೂಪ 'ಭಾರತೀಯ ಬಾಹ್ಯಾಕಾಶ ಸಂಶೋಧನೆಯಲ್ಲಿ ಹೊಸ ಆಯಾಮಗಳು' ಕುರಿತಾಗಿ, ಅದೇ ದಿನ ಮಧ್ಯಾಹ್ನ 12.30 ಕ್ಕೆ ಡಾ.ಬದ್ರಿಪ್ರಸಾದ್ ಪಿ.ಆರ್. ಅವರು 'ಜೇನು ಕೃಷಿಯಲ್ಲಿ ಹೊಸ ಆಯಾಮಗಳು' ಹಾಗೂ ಮಧ್ಯಾಹ್ನ 2.30ಕ್ಕೆ ಶ್ರೀನಿಧಿ ಅವರು 'ಮಾಹಿತಿ ಕ್ಷೇತ್ರದಲ್ಲಿ ವಿವಿಧ ಆಯಾಮಗಳು' ಕುರಿತಾಗಿ ವಿಚಾರ ಮಂಡನೆ ಮಾಡಲಿದ್ದಾರೆ.**

## ತಂತ್ರಜ್ಞಾನದಿಂದ ಸಂಪತ್ತು

**ಮೊದಲ ಪುಟದಿಂದ**

ತಂತ್ರಜ್ಞಾನ ಸಹಜವಾಗಿಯೇ ಸಂಪತ್ತು ಸೃಷ್ಟಿಗೆ ದಾರಿ ಮಾಡಿಕೊಟ್ಟಿದೆ ಎಂದು ವಿಶ್ಲೇಷಿಸಿದರು.

ಇಂದಿನ ಯುಗ ವಿಜ್ಞಾನ ಮತ್ತು ತಂತ್ರಜ್ಞಾನ ಯುಗವಾಗಿದ್ದು, ಶಿಲಾಯುಗ ಮತ್ತು ಲೋಹಯುಗದಿಂದ ಆರಂಭವಾಗಿ ಇಂದು ವಿಜ್ಞಾನಯುಗವಾಗಿ ಬೆಳವಣಿಗೆ ಹೊಂದಿದೆ. 2 ಮಿಲಿಯನ್ ವರ್ಷ ಶಿಲಾಯುಗ. 5 ಸಾವಿರ ವರ್ಷ ಲೋಹಯುಗ, 200 ವರ್ಷ ಕೈಗಾರಿಕಾ ಯುಗ. ಹಿಂದಿನ ಹಾಗೂ ಈಗಿನ ಶತಮಾನ ತಂತ್ರಜ್ಞಾನ ಯುಗ. ಎಲೆಕ್ಟ್ರಿಕಲ್‌ನಿಂದ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್, ವೆಬ್, ಮೊಬೈಲ್, ಕ್ಲೌಡ್, ಗ್ರಿಡ್ ನೆಟ್‌ವರ್ಕಿಂಗ್, ಇಂಟರ್‌ನೆಟ್.. ಹೀಗೆ ಹಲವು ರೂಪಗಳನ್ನು ಪಡೆದುಕೊಂಡಿದೆ. ಮನುಷ್ಯ ತಂತ್ರಜ್ಞಾನದಿಂದ ಎತ್ತರಕ್ಕೆ ಬೆಳೆದು ವಿಜ್ಞಾನದಲ್ಲಿ ಮೂಡಿಬಂದ ಸಂಶೋಧನೆಗಳು ಮಾನವ ನಿಬ್ಬೆರಗಾಗುವಂತೆ ಮಾಡಿದೆ ಎಂದರು.

ಅತಿಥಿಯಾಗಿದ್ದ ಡಾ.ಅಶೋಕ ಆಲೂರು ಮಾತನಾಡಿ, ವಚನ ಸಾಹಿತ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಬಸವಣ್ಣನವರು ಬರೆದಿರುವ ವಚನಗಳನ್ನು ಹೋಲಿಕೆ ಮಾಡುವ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಮಾಹಿತಿ ನೀಡಿದರು.

ಮೊದಲ ತಾಂತ್ರಿಕ ಅಧಿವೇಶನದಲ್ಲಿ ಅನಂತಪುರದ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿವಿಯ ಡಾ.ಅಶೋಕ ಆಲೂರು ವಿಚಾರ ಮಂಡಿಸಿ, ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ಜೀವನ ನಡೆಸುವ ಅದೆಷ್ಟೋ ಕುಟುಂಬಗಳನ್ನು ನಾವು ನೋಡಬಹುದು. ಕೃಷಿಯಲ್ಲೂ ವಿಜ್ಞಾನ ಅಳವಡಿಸುವ ಮೂಲಕ ಇಳುವರಿ ಹೆಚ್ಚಿಸಬಹುದು. ಕೃಷಿಕನಿಗೆ ಅನುಕೂಲವಾಗುವ ಯಂತ್ರೋಪಕರಣಗಳನ್ನು ಸಂಶೋಧಿಸಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

2ನೇ ತಾಂತ್ರಿಕ ಅಧಿವೇಶನದಲ್ಲಿ ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಸಂದರ್ಶಕ ಪ್ರಾಧ್ಯಾಪಕ ಡಾ.ಶಿವಾನಂದ ಕಣವಿ ಅವರು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಡಿಜಿಟಲ್ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು ವಿಷಯ ಕುರಿತು, 3ನೇ ತಾಂತ್ರಿಕ ಅಧಿವೇಶನದಲ್ಲಿ ಬೆಂಗಳೂರಿನ ಅಂತಾರಾಷ್ಟ್ರೀಯ ತಜ್ಞ ಸಮಿತಿ ಮೆಕಿನ್ಸೆಗ್ಲೋಬಲ್ ಇನ್ಸ್ಟಿಟ್ಯೂಟ್‌ನ ಸದಸ್ಯ ಡಾ. ಉದಯಶಂಕರ್ ಪುರಾಣಿಕ್ ಅವರು ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳು ವಿಷಯದ ಕುರಿತು, 4ನೇ ಅಧಿವೇಶನದಲ್ಲಿ ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜಿನ ಸಮುದಾಯ ಔಷಧ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ. ಶೈಲಜಾ.ಎಸ್.ಪಾಟೀಲ ಅವರು ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು ಕುರಿತು ವಿಷಯ ಮಂಡಿಸಿದರು.

ಪ್ರೊ.ಉಷಾದೇವಿ ಹಿರೇಮಠ ನಿರೂಪಿಸಿದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಆಡಳಿತಾಧಿಕಾರಿ ಮಹದೇವಗೌಡ ವಂದಿಸಿದರು. ಪ್ರೊ.ಎ.ಎಸ್.ಪೂಜಾರಿ, ಪ್ರೊ.ಗಿರಿಜಾ ನಿಂಬಾಳ, ಪ್ರೊ.ಯು.ಎಸ್.ಪೂಜಾರಿ ಮತ್ತಿತರಿದ್ದರು. ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಾತ್ಯಕ್ಷಿಕೆಗಳ ವೀಕ್ಷಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



**ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿದ್ದ ಗಣ್ಯರು, ವಿದ್ಯಾರ್ಥಿಗಳು.**

Scanned with CamScanner

19/02/2020

ಸಂಯುಕ್ತ ಕರ್ನಾಟಕ

# ವಚನ ಸಾಹಿತ್ಯದಲ್ಲಿ ವಿಜ್ಞಾನ, ತಂತ್ರಜ್ಞಾನದ ಉಲ್ಲೇಖವಿದೆ



ವಿಜಯಪುರದಲ್ಲಿ ಏರ್ಪಡಿಸಲಾಗಿದ್ದ ವಿಜ್ಞಾನ ತಂತ್ರಜ್ಞಾನ ಸಮ್ಮೇಳನಕ್ಕೆ ಗಣ್ಯರು ಚಾಲನೆ ನೀಡಿದರು.

**ವಿಜಯಪುರ:** ಇಂದಿನ ಯುಗವು ವಿಜ್ಞಾನ ಮತ್ತು ತಂತ್ರಜ್ಞಾನದ ಯುಗವಾಗಿದ್ದು, ಈ ಯುಗವು ಶಿಲಾಯುಗ ಮತ್ತು ಲೋಹಯುಗದಿಂದ ಆರಂಭವಾಗಿ ಇಂದು ವಿಜ್ಞಾನಯುಗವಾಗಿ ಬೆಳವಣಿಗೆ ಹೊಂದಿದೆ. ಈ ವಿಜ್ಞಾನದಲ್ಲಿ ಮೂಡಿಬಂದ ಸಂಶೋಧನೆಗಳು ಮಾನವ ನಿಬ್ಬೆರಗಾಗುವಂತೆ ಮಾಡಿದೆ ಎಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ ಹೇಳಿದರು.

ನಗರದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಂಯುಕ್ತಾಶ್ರಯದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಎರಡು ದಿನಗಳ ಕಾಲ ನಡೆಯುತ್ತಿರುವ ಕನ್ನಡದಲ್ಲಿ ಮೂರನೇಯ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತಿನಾದ್ಯಂತ ಪಸರಿಸುತ್ತಿದೆ ಎಂದರು.

ಡಾ.ಅಶೋಕ ಆಲೂರು ಮಾತನಾಡಿ, ವಚನ ಸಾಹಿತ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಬಸವಣ್ಣನವರು ಬರೆದಿರುವ ವಚನಗಳನ್ನು ಹೋಲಿಕೆ ಮಾಡುವ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಮಾಹಿತಿ ನೀಡಿದರು.

ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ಜೀವನ ನಡೆಸುವ ಅದೆಷ್ಟೋ ಕುಟುಂಬಗಳನ್ನು ನಾವು ನೋಡಬಹುದಾಗಿದೆ. ಈ ಕೃಷಿಯಲ್ಲಿಯೂ ಸಹ ವಿಜ್ಞಾನವನ್ನು ಅಳವಡಿಸುವ ಮೂಲಕ ಇಳುವರಿಯನ್ನ ಹೆಚ್ಚಿಸಬಹುದು ಹಾಗೂ ಕೃಷಿಕನಿಗೆ ಸಹಕರಿಸಲು ಹಲವಾರು ಯಂತ್ರೋಪಕರಣಗಳು ಇಂದು ಸಂಶೋಧಿಸಲಾಗಿದೆ ಎಂದರು.

ಡಾ.ಉದಯಶಂಕರ ಪುರಾಣಿಕ, ಡಾ.ಎ.ಎಂ. ರಮೇಶ, ಡಾ.ಶಿವಾನಂದ ಕಣವಿ, ಪ್ರೊ.ಎ.ಎಸ್. ಪೂಜಾರಿ, ಪ್ರೊ.ಗಿರಿಜಾ ನಿಂಬಾಳ ಉಪಸ್ಥಿತರಿದ್ದರು. ಪ್ರೊ.ಉಷಾದೇವಿ ಹಿರೇಮಠ, ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಆಡಳಿತಾಧಿಕಾರಿ ಮಹದೇವಗೌಡ ಕಾರ್ಯಕ್ರಮ ನಿರ್ವಹಿಸಿದರು. **ತಾಂತ್ರಿಕ ಗೋಷ್ಠಿ -ವಿಚಾರ ಮಂಡನೆ:** ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ ಸ್ಟಡೀಸ್‌ನ ಸಂದರ್ಶಕ ಪ್ರಾಧ್ಯಾಪಕ ಡಾ.ಶಿವಾನಂದ ಕಣವಿ ಅವರು 'ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಗೆಡಿಜಿಟಲ್ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು' ಎಂಬ ವಿಷಯದ ಕುರಿತು, ಬೆಂಗಳೂರಿನ ಅಂತಾರಾಷ್ಟ್ರೀಯ ತಜ್ಞ ಸಮಿತಿ ಮೆಕಿನ್ಸೆಗ್ಲೋಬಲ್ ಇನ್ಸ್ಟಿಟ್ಯೂಟ್‌ನ ಸದಸ್ಯ ಡಾ.ಉದಯಶಂಕರ ಪುರಾಣಿಕ ಅವರು 'ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳು' ಎಂಬ ವಿಷಯದ ಕುರಿತು, ಡಾ.ಶೈಲಜಾ ಪಾಟೀಲ ಅವರು 'ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು' ಕುರಿತು ವಿಷಯ ಮಂಡಿಸಿದರು.

Scanned with CamScanner

19/02/2020

THE NEW INDIAN EXPRESS
03 BELAGAVI



Prof K Chidananda Gowda releasing the poster along with other dignitaries at Science and Technology Convention in Kannada in Vijayapura on Tuesday | EXPRESS

# Ex-VC stresses on judicious use of science, technology

EXPRESS NEWS SERVICE
@Vijayapura

"THE proper utilisation of science and technology can guarantee enormous amount of wealth", asserted Professor K Chidaanandagowda, who was vice-chancellor of Kuvempu University.

He was addressing the gathering during third Science and Technology Convention in Kannada organised by Karnataka Science and Technology Academy in collaboration with BLDE Association's SB Arts and KCP Science Mahavidyalaya at its college auditorium on Tuesday.

Gowda said "The science and technology existed centuries ago, but with a different name. Metal age was the first which was about 5,000 years ago, thereafter industrial revolution about 200 years ago, followed by electric and electronic age in early 20th century and in the recent years it is called as network computer, web, cloud computing, network and knowledge age, network and things. In the future it might be Internet of Species where a network will be developed to communicate between species and human beings."

"The technology is growing rapidly in the recent years. One should make proper utilisation of it. Most of the people won't believe in Adam and Eve story, but it is true that we all belong to the same family. Meanwhile, we should also live in harmony, peace and with integrity," stated Gowda a former vice-chancellor of Kuvempu University.

Speaking on the occasion, Ashok Aallur, vice-chancellor of Bharatiya Engineering Science and Technology Innovation University of Anantapur said, "It is the responsibility of every Kannadiga to popularise Science and Technology in Kannada. The science and technology has a vast history and it is evident since 12th century. The vachana literature and science and technology should be compared. In many vacahanas the 12th century social reformer Basavanna, Allamaprabhu and many others wrote with scientific importance, but, majority of them failed to research on them. In 12th century the philosophers spoke about soil fertility and weed science in their vachanas".

Only Karnataka and Kerala houses Science and Technologies Academy in the country. In order to kindle interest about science and technology among students, the regional science centres are also being developed. Meanwhile, state is making leaps in Science and Technology as Bengaluru is turning out to be an Information Technology hub in the country and it is also called as 'Silicon Valley of India'. The KSTA should organise more programmes in its calendar year instead of limiting to one programme, urged Prof Dr Shivananda Kanvi.

Meanwhile, Dr Udayshankar Puranik asserted that, "the development of science and technology will definitely create job opportunities".

Over 500 researchers, professor, lecturers and students presented posters on the various topics of cyber, nano, macro, health sciences and agriculture and space, followed by sharing their views on the same subjects.

Scanned with CamScanner

# ಉದಯವಾಣಿ

ಜನಮನದ ಜೀವನಾಡಿ

www.udayavani.com Kalaburagi ಕಲಬುರಗಿ | ಬುಧವಾರ, ಫೆಬ್ರವರಿ 19, 2020 | ಪುಟ 12+4 | ₹ 5.00 ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ


## ಶಿಲಾಯುಗದಿಂದಲೂ ವಿಜ್ಞಾನ ಬೆಳವಣಿಗೆ: ಚಿದಾನಂದಗೌಡ



ವಿಜಯಪುರ: ನಗರದಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ಮತ್ತು ತಂತ್ರಜ್ಞಾನ ಮೂರನೇ ಸಮ್ಮೇಳನಕ್ಕೆ ಪ್ರೊ| ಕೆ.ಚಿದಾನಂದಗೌಡ ಚಾಲನೆ ನೀಡಿದರು.

**ವಿಜಯಪುರ:** ಪ್ರಸ್ತುತ ಯುಗ ವಿಜ್ಞಾನ-ತಂತ್ರಜ್ಞಾನ ಯುಗ ಎನಿಸಿಕೊಂಡಿದ್ದರೂ ಶಿಲಾಯುಗ, ಲೋಹಯುಗದ ಕಾಲದಿಂದಲೂ ವಿಜ್ಞಾನಯುಗ ಬೆಳವಣಿಗೆ ಹೊಂದುತ್ತ ಬಂದಿದೆ. ವಿಜ್ಞಾನದ ಸಂಶೋಧನೆಗಳು ಮಾನವ ನಿಬ್ಬೆರಗಾಗುವಂತೆ ಬೆಳೆದು ಬಂದಿದೆ ಎಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ಚಿದಾನಂದಗೌಡ ಹೇಳಿದರು.

ನಗರದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇದರ ಅಡಿಯಲ್ಲಿ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಸಹಯೋಗದಲ್ಲಿ ನಡೆಯುತ್ತಿರುವ ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದು ಬಂದ ದಾರಿ ಹಾಗೂ ಪ್ರಸ್ತುತ ದಿನಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತಿನಾದ್ಯಂತ ಪಸರಿಸುತ್ತಿದೆ ಎಂದು ತಿಳಿಸಿದರು.

ಮೊದಲ ತಾಂತ್ರಿಕ ಅಧಿವೇಶನದಲ್ಲಿ ಮಾತನಾಡಿದ ಅನಂತಪುರ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ-ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯದ ಡಾ| ಅಶೋಕ ಆಲೂರ, ಎರಡನೇ ಗೋಷ್ಠಿಯಲ್ಲಿ ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಸಂದರ್ಶಕ ಪ್ರಾಧ್ಯಾಪಕ ಡಾ| ಶಿವಾನಂದ ಕಣವಿ ಅವರು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಗೆ ಡಿಜಿಟಲ್ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳ ಕುರಿತು ಮಾತನಾಡಿದರು.

ಮೂರನೇ ತಾಂತ್ರಿಕ ಅಧಿವೇಶನದಲ್ಲಿ ಬೆಂಗಳೂರಿನ ಅಂತಾರಾಷ್ಟ್ರೀಯ ತಜ್ಞ ಸಮಿತಿ ಮೆಕಿನ್ಸೆಗ್ಲೋಬಲ್ ಇನ್ಸ್ಟಿಟ್ಯೂಟ್ ಸದಸ್ಯ ಡಾ| ಉದಯಶಂಕರ ಪುರಾಣಿಕ ಅವರು ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳ ಕುರಿತು ಪ್ರಬಂಧ ಮಂಡಿಸಿದರು.

ನಾಲ್ಕನೇ ತಾಂತ್ರಿಕ ಅಧಿವೇಶನದಲ್ಲಿ ಬಿ.ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಸಮುದಾಯ ಔಷಧ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ| ಶೈಲಜಾ ಪಾಟೀಲ ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳ ಕುರಿತು ವಿಷಯ ಮಂಡಿಸಿದರು. ಉಮಾದೇವಿ ಹಿರೇಮಠ ನಿರೂಪಿಸಿದರು.

Scanned with CamScanner

ವಿಜಯ ಕರ್ನಾಟಕ

ದಿ: 20/02/2020

## ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ ಸಮ್ಮೇಳನ

# ಬಾಹ್ಯಾಕಾಶ ತಂತ್ರಜ್ಞಾನಕ್ಕೆ ಆಕಾಶವೂ ಸೀಮಿತವಲ್ಲ

■ **ವಿಕ ಸುದ್ದಿಲೋಕ** ವಿಜಯಪುರ

ಬ್ಯಾಹ್ಯಾಕಾಶ ತಂತ್ರಜ್ಞಾನ ವ್ಯಾಪಕವಾಗಿ ಪ್ರಗತಿ ಹೊಂದಿದೆ, ಇಂದಿನ ಬ್ಯಾಹ್ಯಾಕಾಶ ತಂತ್ರಜ್ಞಾನಕ್ಕೆ ಆಕಾಶ ಕೂಡ ಸೀಮಿತವಲ್ಲ, ಬ್ಯಾಹ್ಯಾಕಾಶ ಪ್ರವಾಸೋದ್ಯಮವಾಗಿಯೂ ಬೆಳೆಯುತ್ತಿದೆ ಎಂದು ಇಸ್ರೋ ವಿಜ್ಞಾನಿ ಡಾ.ಎಂ.ವಿ.ರೂಪಾ ತಿಳಿಸಿದರು.

**ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು' ತಾಂತ್ರಿಕ ಗೋಷ್ಠಿ**



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್ ಸಭಾಂಗಣದಲ್ಲಿ ನಡೆದ ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನ ಸಮ್ಮೇಳನದಲ್ಲಿ ಇಸ್ರೋ ವಿಜ್ಞಾನಿ ಡಾ.ಎಂ.ವಿ.ರೂಪಾ ಮಾತನಾಡಿದರು.

ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಮಾಹಿತಿ-ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನದ 2ನೇ ದಿನವಾದ ಬುಧವಾರ 'ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು' ಎಂಬ ವಿಷಯ ತಾಂತ್ರಿಕ ಗೋಷ್ಠಿಯಲ್ಲಿ ಅವರು ಬಾಹ್ಯಾಕಾಶ ಕೌತುಕ ಕುರಿತು ವಿಚಾರ ಮಂಡಿಸಿದರು.

ಇಂದು ಬಾಹ್ಯಾಕಾಶ ಪ್ರವಾಸೋದ್ಯಮ ಬೆಳೆಯುತ್ತಿದ್ದು ರಷ್ಯಾದ ಮೈಕ್‌ಕ್ರಾಫ್ ಹಾಗೂ ಅಮೆರಿಕಾದ ಸ್ಪೇಸ್ ಅಡ್ವೆಂಚರ್ಸ್ ಲಿಮಿಟೆಡ್ ಕಂಪನಿಗಳ ಸಹಭಾಗಿತ್ವದಲ್ಲಿ ಬ್ಯಾಹ್ಯಾಕಾಶ ಪ್ರವಾಸ ಆರಂಭವಾಯಿತು. ಅಮೆರಿಕಾದ ಡೆನ್ನಿಸ್ ಟೆಟೋ ಮೊದಲ ಖಾಸಗಿಯಾತ್ರಿಯಾಗಿ ಬ್ಯಾಹ್ಯಾಕಾಶ ಪ್ರವಾಸ ಕೈಗೊಂಡರು ಎಂದು ನೆರೆದ ವಿದ್ಯಾರ್ಥಿಗಳಿಗೆ ವಿವರಿಸಿದರು.

**ಭೂಮಿಯಂತೆ ಗ್ರಹಗಳ ಅನ್ವೇಷಣೆ:** ಭೂಮಿ ಎಲ್ಲ ಗ್ರಹಗಳಿಗಿಂತಲೂ ವಿಭಿನ್ನವಾಗಿದೆ. ಪ್ರಸ್ತುತ ಭೂಮಿಯಲ್ಲಿ ನಡೆದಿರುವ ಸನ್ನಿವೇಶಗಳನ್ನು ಗಮನಿಸಿದಾಗ ಇಲ್ಲೇ ಬದುಕುತ್ತೇವೆ ಎಂಬ ಭರವಸೆ ಇಲ್ಲದಂತಾಗಿದೆ ಎಂದು ಕಳವಳವ್ಯಕ್ತಪಡಿಸಿದರು. »IV

Kannada Prabha • Daily • Wednesday • 19.2.2020 • Volume 54 • Issue 50 • Pages 12+4 • Price ₹6

ಬುಧವಾರ 19.2.2020
ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 54 • ಸಂಚಿಕೆ 50 • ಪುಟ 12+4 • ಬೆಲೆ ₹6
epaper.kannadaprabha.in

ಉಡ್ತಾ ಪಂಜಾಬ್ ವಿರುದ್ಧ ಕನ್ನ
ಪ್ರೊಫೆಸರ್ ಗಾನ ಅಭಿಯಾನ!

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸಮ್ಮೇಳನ

ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನಕ್ಕೆ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಚಾಲನೆ

# ವಿಜ್ಞಾನ ಸಂಶೋಧನೆಗಳು ಅದ್ಭುತ: ಪ್ರೊ. ಕೆ. ಚಿದಾನಂದಗೌಡ

• ಕನ್ನಡಪ್ರಭ ವಾರ್ತೆ ವಿಜಯಪುರ

ಇಂದಿನ ಯುಗದ ವಿಜ್ಞಾನದಲ್ಲಿ ಮೂಡಿಬಂದ ಸಂಶೋಧನೆಗಳು ಮನುಷ್ಯ ನಿಬ್ಬೆರಗಾಗುವಂತೆ ಮಾಡಿವೆ ಎಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ ಅಭಿಪ್ರಾಯಪಟ್ಟರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಮಂಗಳವಾರ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಮಹಾವಿದ್ಯಾಲಯ ವತಿಯಿಂದ ನಡೆದ ಎರಡು ದಿನ ನಡೆಯುತ್ತಿರುವ ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ವಿಜ್ಞಾನ, ತಂತ್ರಜ್ಞಾನದ ಯುಗವಾಗಿದ್ದು, ಈ ಯುಗವು ಶಿಲಾಯುಗ ಮತ್ತು ಲೋಹಯುಗದಿಂದ ಆರಂಭವಾಗಿ ಇಂದು ವಿಜ್ಞಾನಯುಗವಾಗಿ ಬೆಳವಣಿಗೆ ಹೊಂದಿದೆ. ಪ್ರಸ್ತುತ ದಿನಮಾನಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಜಗತ್ತಿನಾದ್ಯಂತ ಪಸರಿಸುತ್ತಿದೆ ಎಂದರು.



ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಸಮ್ಮೇಳನದಲ್ಲಿ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ ಮಾತನಾಡಿದರು.

ಮೊದಲ ತಾಂತ್ರಿಕ ಗೋಷ್ಠಿಯಲ್ಲಿ ಅನಂತಪುರದ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯ ಕುಲಪತಿ ಡಾ. ಅಶೋಕ ಆಲೂರ ಮಾತನಾಡಿ, ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ಜೀವನ ನಡೆಸುವ ಅದೆಷ್ಟೋ ಕುಟುಂಬಗಳನ್ನು ನಾವು ನೋಡಬಹುದಾಗಿದೆ. ಈ ಕೃಷಿಯಲ್ಲೂ ಸಹ ವಿಜ್ಞಾನವನ್ನು ಅಳವಡಿಸುವ ಮೂಲಕ ಇಳುವರಿ ಹೆಚ್ಚಿಸಬಹುದು ಹಾಗೂ ಕೃಷಿಕನಿಗೆ ಸಹಕರಿಸಲು ಹಲವು ಯಂತ್ರೋಪಕರಣಗಳು ಇಂದು ಸಂಶೋಧಿಸಲಾಗಿದೆ ಎಂದರು.

ಎರಡನೇ ಗೋಷ್ಠಿಯಲ್ಲಿ ಬೆಂಗಳೂರಿನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಸಂದರ್ಶಕ ಪ್ರಾಧ್ಯಾಪಕ ಡಾ. ಶಿವಾನಂದ ಕಣವಿ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಗೆ ಡಿಜಿಟಲ್ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಮೂರನೇ ಗೋಷ್ಠಿಯಲ್ಲಿ ಬೆಂಗಳೂರಿನ ಅಂತಾರಾಷ್ಟ್ರೀಯತಜ್ಞಸಮಿತಿಮೆಕಿನ್ಸೆಗ್ಲೋಬಲ್ ಇನ್ಸಿಟ್ಯೂಟ್‌ನ ಸದಸ್ಯ ಡಾ.ಉದಯಶಂಕರ್ ಪುರಾಣಿಕ್ ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳು ಎಂಬ ವಿಷಯದ ಕುರಿತು ಮಾತನಾಡಿದರು.

ನಾಲ್ಕನೇ ತಾಂತ್ರಿಕ ಅಧಿವೇಶನದಲ್ಲಿ ಬಿ. ಎಂ.ಪಾಟೀಲ್ ವೈದ್ಯಕೀಯ ಕಾಲೇಜಿನ ಸಮುದಾಯ ಔಷಧ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ. ಶೈಲಜಾ ಎಸ್. ಪಾಟೀಲ ಅವರು ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು ಕುರಿತು ವಿಷಯ ಮಂಡಿಸಿದರು.

ಪ್ರೊ. ಎ.ಎಸ್. ಪೂಜಾರಿ, ಪ್ರೊ. ಗಿರಿಜಾ ನಿಂಬಾಳ, ಪ್ರೊ. ಯು.ಎಸ್. ಪೂಜಾರಿ ಮುಂತಾದವರು ಇದ್ದರು.

ಪ್ರೊ. ಹಿರೇಮಠ ನಿರೂಪಿಸಿದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಬೆಂಗಳೂರಿನ ಆಡಳಿತಾಧಿಕಾರಿ ಮಹದೇವಗೌಡ ವಂದಿಸಿದರು.

Scanned with CamScanner

ಗುರುವಾರ, ಮಾರ್ಚ್ 12, 2020 | ಕಲಬುರ್ಗಿ | ₹ 6.00 | ಸಂಪುಟ 13 | ಸಂಚಿಕೆ 72 | ಪುಟ 14

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಧಾನ ಮಂಡಲದಲ್ಲಿ

ಎರಡನೇ ದಿನವೂ ಕಲಾಪ ಬಲಿ

7 ಹಕ್ಕುಚ್ಯುತಿ ಮಂಡನೆಗೆ ಜಟಾಪಟಿ

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) |
|---|---|---|
| 35,697 | 10,458 | ₹43,742 (ಬೆಂಗಳೂರು) |

## ಗಮನ ಸೆಳೆದ 'ಹಳ್ಳಿ ಹಬ್ಬ'

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ.ಕಲಾ ಹಾಗೂ ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಮಹಿಳಾ ಸಬಲೀಕರಣ ಕೋಶ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಈಚೆಗೆ ಮಹಿಳಾ ದಿನಾಚರಣೆ ಅಂಗವಾಗಿ 'ನಾಡ ಹಬ್ಬ' ಮತ್ತು 'ಹಳ್ಳಿ ಹಬ್ಬ' ಕಾರ್ಯಕ್ರಮಗಳು ಜರುಗಿದವು.

ಇಡೀ ಆವರಣವನ್ನು ಹಳ್ಳಿಯ ಸಂಸ್ಕೃತಿಯಿಂದ ಅಲಂಕರಿಸಲಾಗಿತ್ತು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಗಮನ ಸೆಳೆದರು. ಲಗೋರಿ, ಹಗ್ಗ ಜಗ್ಗಾಟ, ಹುಲಿ ಕುರಿ ಆಟ, ಕೊಕ್ಕೊ, ಮಾರ್ಬಲ್ಸ್, ಬಗಾರಿ ಸ್ಪರ್ಧೆಗಳು ಜರುಗಿದವು.

ಸಾಂಸ್ಕೃತಿಕ ಕಲರವ ನಡೆಯಿತು. ಇದರಲ್ಲಿ ವಿವಿಧ ರಾಜ್ಯಗಳ ಸಂಸ್ಕೃತಿಯನ್ನು ಬಿಂಬಿಸಲಾಯಿತು. ಮಹಾರಾಷ್ಟ್ರ ರಾಜ್ಯ ಪ್ರಾತಿನಿಧ್ಯವನ್ನು ಬಿ.ಎಸ್ಸಿ (ಮೂಲ ವಿಜ್ಞಾನ) ಸುಧಾ, ಉಮಾ, ಆಕಾಶ್ ಮತ್ತು ತಂಡ (ಪ್ರಥಮ), ಜಮ್ಮು ಮತ್ತು ಕಾಶ್ಮೀರ ಪ್ರಾತಿನಿಧ್ಯದ ಬಿ.ಎಸ್ಸಿ (ಲೈಫ್ ಸೈನ್ಸ್) ತಂಡ (ದ್ವಿತೀಯ), ಅಸ್ಸಾಂ ಪ್ರಾತಿನಿಧ್ಯದ ಬಿಎ ತಂಡವು (ತೃತೀಯ) ಬಹುಮಾನ ಪಡೆದುಕೊಂಡವು.



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ.ಕಲಾ ಹಾಗೂ ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಈಚೆಗೆ ನಡೆದ ಮಹಿಳಾ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿ ಗಮನ ಸೆಳೆದರು

ಕರಕುಶಲ ಕಲಾವಿದೆ ಸುಪ್ರಿಯಾ ಕಲಾಸ್ಕೊಂಡ್, ಕೊಲ್ಹಾಪುರದ ಗ್ರಾಫಿಕ್ ಡಿಸೈನರ್ ರೂಪಾಲಿ ಸೊರ್ವೋಡ್ ಮಾತನಾಡಿದರು.

ಪ್ರಾಂಶುಪಾಲ ಡಾ.ಎ.ಎಸ್. ಪೂಜಾರ, ಐಕ್ಯೂಎಸಿಯ ಡಾ.ಯು.ಎಸ್.ಪೂಜೇರಿ, ಮಹಿಳಾ ಸಬಲೀಕರಣ ಕೋಶದ ಅಧ್ಯಕ್ಷೆ ಪ್ರೊ.ವಿದ್ಯಾ ಆರ್. ಪಾಟೀಲ, ಪ್ರೊ.ರಶ್ಮಿ ಪಾಟೀಲ, ಡಾ.ಉಷಾದೇವಿ ಹಿರೇಮಠ, ಪ್ರೊ.ಅಶ್ವಿನಿ ಹಿರೇಮಠ, ಸವಿತಾ ಕನಕರಡ್ಡಿ ಇದ್ದರು.

Scanned with CamScanner

ಭಾನುವಾರ, ಸೆಪ್ಟೆಂಬರ್ 29, 2019 | ₹ 6.00
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

## ‘ಮಹಿಳೆ ಅಡುಗೆ ಮನೆಗೆ ಸೀಮಿತ ಅಲ್ಲ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಮಹಿಳೆಯರನ್ನು ಕೇವಲ ಅಡುಗೆ ಮನೆಗೆ ಸೀಮಿತಗೊಳಿಸದೆ, ಅವರಿಗೂ ಅಧಿಕಾರ, ಜವಾಬ್ದಾರಿಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಬೇಕು’ ಎಂದು ಸಂಪನ್ಮೂಲ ವ್ಯಕ್ತಿ ಭಾಗ್ಯವತಿ ಹೇಳಿದರು.

ನಗರದ ಬಿ.ಎಲ್‌.ಡಿ.ಇ ಸಂಸ್ಥೆಯ ಎಸ್‌.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಮಹಿಳಾ ಸಶಕ್ತ ಘಟಕದ ವತಿಯಿಂದ ನಡೆದ ‘ಅಡುಗೆ ಮನೆಯಿಂದ ಕ್ಯಾಬಿನ್‌ವರೆಗೆ ಮಹಿಳೆಯರಿಗೆ ಅಧಿಕಾರ ನೀಡುವುದು’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಗ್ರಾಮೀಣ ಪ್ರದೇಶದ ಜನರು ವಿದ್ಯೆ ಇಲ್ಲದಿದ್ದರೂ ಸದೃಢವಾದ ಆಹಾರ ಸೇವಿಸುತ್ತಾರೆ. ಆದರೆ, ನಗರ, ಪಟ್ಟಣ ನಿವಾಸಿಗಳು ಕೆಲಸದ ಒತ್ತಡಕ್ಕೆ ಆಹಾರದ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಸಿರಿಧಾನ್ಯಗಳನ್ನು ಬಳಸಿ ರುಚಿಕರ ಹಾಗೂ ಗುಣಮಟ್ಟದ ಆಹಾರ ಸೇವನೆ ಮಾಡಬೇಕು. ಮಹಿಳೆಯರಿಗೆ ಶಿಕ್ಷಣದ ಜತೆಗೆ ಪೌಷ್ಟಿಕಾಂಶಗಳುಳ್ಳ ಆಹಾರ ಅತ್ಯವಶ್ಯ’ ಎಂದರು.

ಮಹಿಳಾ ಸಶಕ್ತ ಘಟಕದ ಮುಖ್ಯಸ್ಥೆ ಪ್ರೊ.ವಿದ್ಯಾ ಪಾಟೀಲ ಮಾತನಾಡಿ, ‘ಮಹಿಳೆಗೆ ಸಾಧಿಸಲು ಧೈರ್ಯವಿರಬೇಕು. ತನ್ನ ಆಲೋಚನೆಗಳು ಮತ್ತು ಕೆಲಸಗಳಿಂದ ಸ್ವತಂತ್ರವಾಗಿದ್ದರೆ, ಕಠಿಣ ಕೆಲಸಗಳನ್ನು ಸುಲಭವಾಗಿ ನಿಭಾಯಿಸಬಹುದು’ ಎಂದು ಹೇಳಿದರು.

ಹರಿನಾ ಪೂಜಾರಿ ಸೇರಿದಂತೆ ವಿವಿಧ ವಿಭಾಗ ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು. ಸುಧಾ ಮತ್ತು ಉಮಾ ನಿರೂಪಿಸಿದರು. ಪ್ರೊ. ಉಶಾದೇವಿ ಸ್ವಾಗತಿಸಿದರು. ಪ್ರೊ. ದೀಪಾಂಜಲಿ ವಂದಿಸಿದರು.

Scanned with CamScanner



# ವಿಜಯವಾಣಿ

ಡಾ. ವಿಜಯ ಸಂಕೇಶ್ವರ ಸಾರಥ್ಯದಲ್ಲಿ | ಕನ್ನಡಿಗರ ಧ್ವನಿ

VIJAYAVANI • VIJAYAPURA

epaper.vijayavani.in | VVaniHU | @VVANIHU | vijayavaninews@gmail.com | ಸಹಾಯವಾಣಿ: 8884411686 | 26 ಸೆಪ್ಟೆಂಬರ್


ಪ್ರಾಂಶುಪಾಲ ಡಾ. ಪೂಜಾರಿ ಹೇಳಿಕೆ | ವಿಜಯಪುರದಲ್ಲಿ ಫಿಟ್ ಇಂಡಿಯಾ ಅಭಿಯಾನ

## ಸೈಕಲ್ ಚಲಾಯಿಸಿ ಪರಿಸರ ಉಳಿಸಿ

ವಿಜಯವಾಣಿ ಸುದ್ದಿಜಾಲ ವಿಜಯಪುರ

ಐತಿಹಾಸಿಕ ನಗರಿಯನ್ನು ಸ್ವಚ್ಛ ಹಾಗೂ ಸುಂದರವಾಗಿಡುವುದರ ಜತೆಗೆ ಶಾರೀರಿಕ ಸದೃಢತೆಗೆ ಸೈಕಲ್ ಸವಾರಿ ತುಂಬ ಸಹಕಾರಿ ಎಂದು ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯು.ಎಸ್. ಪೂಜಾರಿ ಹೇಳಿದರು.

ನಗರದಲ್ಲಿ ಬುಧವಾರ ಬೆಳಗ್ಗೆ 'ಫಿಟ್ ಇಂಡಿಯಾ ಅಭಿಯಾನ'ದಡಿ ಸಿದ್ಧೇಶ್ವರ ದೇವಸ್ಥಾನದಿಂದ ಗಗನಮಹಲ್ ಆವರಣದವರೆಗೆ ಆಯೋಜಿಸಿದ್ದ ಸೈಕಲ್ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಜಯಪುರ ಐತಿಹಾಸಿಕ ಜಿಲ್ಲೆ. ಅನೇಕ ಸ್ಮಾರಕಗಳನ್ನು ಒಡಲಲ್ಲಿಟ್ಟುಕೊಂಡಿದೆ. ಇಂಥ ನಗರವನ್ನು ಸುಂದರ ಪ್ರವಾಸಿ ತಾಣವಾಗಿ ಕಂಗೊಳಿಸುವಂತೆ ಮಾಡಲು ಈ ಸೈಕಲ್ ಸವಾರಿ ತುಂಬ ಸಹಕಾರಿಯಾಗಿದೆ. ಸೈಕಲ್ ಬಳಕೆಯಿಂದ ಪರಿಸರವನ್ನು ಶಬ್ದ ಮತ್ತು ವಾಯು ಮಾಲಿನ್ಯದಿಂದ ಮುಕ್ತಗೊಳಿಸಬಹುದು. ಜತೆಗೆ ದೇಹದ ಸದೃಢತೆಗೂ ಇದು ಅನುಕೂಲವಾಗಲಿದೆ ಎಂದರು.

**» 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗಿ**

ಭಾರತದಲ್ಲಿ ಸೈಕಲ್ ಲೈನ್ ಕಡಿಮೆ ಇರುವುದರಿಂದ ಸೈಕಲ್ ಬಳಕೆ ಕಡಿಮೆಯಾಗಿದೆ. ಉಳಿದ ಎಲ್ಲ ದೇಶಗಳಂತೆ ಇಲ್ಲೂ ಸಹ ಸೈಕಲ್ ಲೈನ್ ಇದ್ದರೆ ಬಳಕೆಗೆ ಅನುಕೂಲವಾಗಲಿದೆ ಎಂದರು.

ಪ್ರಾಧ್ಯಾಪಕರು, ಎನ್‌ಎಸ್‌ಎಸ್ ಘಟಕದ ಸದಸ್ಯರು ಹಾಗೂ ಕಾಲೇಜಿನ ವಿವಿಧ ವಿಭಾಗದ ಸುಮಾರು 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಡಾ.ಜಿ.ಆರ್. ಅಂಬಲಿ, ಪ್ರೊ.ವಿದ್ಯಾ ಪಾಟೀಲ, ಪ್ರೊ.ಸಂತೋಷ, ಪ್ರೊ.ದೀಪಾಂಜಲಿ ಇತರರಿದ್ದರು.



ವಿಜಯಪುರದ ಗಗನಮಹಲ್‌ನಲ್ಲಿ 'ಫಿಟ್ ಇಂಡಿಯಾ ಅಭಿಯಾನ'ದಡಿ ಸೈಕಲ್ ಜಾಥಾ ಸಂಪನ್ನಗೊಳಿಸಿದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು.

## ಪರಿಸರ ರಕ್ಷಿಸದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ

ವಿಜಯಪುರ: ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆ. ಪರಿಸರ ರಕ್ಷಿಸದೇ ಹೋದರೆ ಅಪಾಯ ಕಟ್ಟಿಟ್ಟ ಬುತ್ತಿ. ಪ್ರತಿಯೊಬ್ಬರೂ ಪರಿಸರ ರಕ್ಷಣೆಗೆ ಕಟಿಬದ್ಧರಾಗಬೇಕೆಂದು ಸಂಯುಕ್ತಾ ಪಾಟೀಲ ಹೇಳಿದರು.

ನಗರದಲ್ಲಿ ಅನೌಪಚಾರಿಕ ಶಿಕ್ಷಣ ಸಂಸ್ಥೆ, ಸ್ನೇಹ ಅಭಿವೃದ್ಧಿ ಕೇಂದ್ರ, ಲೋಯೋಲಾ, ಸ್ನೇಹ ಸಂಗಮ ಶಾಲೆ, ಸಂತ ಜೋಸೆಫ್ ಶಾಲೆ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಶಾಲೆ ಮಕ್ಕಳು ಪರಿಸರ ಜಾಗೃತಿಯಲ್ಲಿ ತೊಡಗಿರುವುದು ತುಂಬ ಸಂತಸ ತಂದಿದೆ. ಮಕ್ಕಳ ಈ ಪರಿಸರ ಜಾಗೃತಿ ಜಾಥಾ ಸ್ವೀಡನ್ ದೇಶದ ಶಾಲೆಯ ಮಗುವಾದ ಗ್ರೇಟಾ ಟನ್‌ಬರ್ಗ್‌ಳ ನೆನಪಾಗುತ್ತದೆ. ಗ್ರೇಟಾ ಟನ್‌ಬರ್ಗ್ ಅವರು ಹವಾಮಾನ ಬದಲಾವಣೆ ಹಾಗೂ ಪರಿಸರ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ವಿಶ್ವ ಸಂಸ್ಥೆಯ ಮುಂದೆ ಒಬ್ಬಂಟಿಯಾಗಿ ಪ್ರತಿ ಶನಿವಾರ ಧರಣಿ ನಡೆಸುತ್ತಿದ್ದಳು. ದಿನಕಳೆದಂತೆ ಈಕೆ ಹೋರಾಟ ಅನೇಕರನ್ನು ಪ್ರೇರೇಪಿಸಿತು. ಪರಿಣಾಮ ವಿಶ್ವದೆಲ್ಲೆಡೆ ಜಾಗೃತಿ ಪ್ರಾರಂಭವಾಯಿತು. ಅದೇ ರೀತಿ ಇಲ್ಲಿನ ಶಾಲೆ ಮಕ್ಕಳು ಜಾಗೃತಿಯಲ್ಲಿ ತೊಡಗಿದ್ದು ಖುಷಿಯ ವಿಚಾರ. ಮತ್ತು ಪ್ರತಿಯೊಬ್ಬ ನಾಗರಿಕ ಪರಿಸರ ರಕ್ಷಣೆಗೆ ಕೈಜೋಡಿಸಬೇಕೆಂದರು.



ವಿಜಯಪುರದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪರಿಸರ ಜಾಗೃತಿಗಾಗಿ ಜಾಥಾ ನಡೆಸಿದರು.

ಪಾಲಿಕೆಯ ಪರಿಸರ ಅಭಿಯಂತರ ಜಗದೀಶ ಮಾಹಿನಾಳ, ನಾವೆಲ್ಲರೂ ನಮ್ಮ ಸುತ್ತಲಿನ ಪರಿಸರವನ್ನು ಸುಂದರವಾಗಿಟ್ಟುಕೊಳ್ಳಬೇಕು. ಮನೆಯಿಂದಲೇ ಕಸ ವಿಂಗಡಿಸಬೇಕು. ಪ್ಲಾಸ್ಟಿಕ್ ಬಳಕೆ ಪ್ರಮಾಣ ಕಡಿಮೆಯಾಗಬೇಕು. ಮುಂದಿನ ಪೀಳಿಗೆಗಾಗಿ ಒಂದೊಂದು ಸಸಿ ನೆಡಬೇಕು ಎಂದರು. ಜಲ ಬಿರಾದಾರಿಯ ಅಧ್ಯಕ್ಷ ಪೀಟರ್ ಅಲೆಕ್ಸಾಂಡರ್, ಫಾದರ್ ಫ್ರಾನ್ಸಿಸ್, ಬಾಲರಾಜ, ಫಾದರ್ ಲೋಮನೀಸ್, ಅಕ್ರಂ ಮಾಶ್ಯಾಳಕರ, ರುದ್ರಮುನಿ, ರಾಜೇಶ್ವರಿ ಮಠಪತಿ, ಶೋಭಾ ಗಾಯಕವಾಡ ಇತರರಿದ್ದರು. ಮಹಾತ್ಮ ಗಾಂಧಿ ವೃತ್ತದಲ್ಲಿ 100ಕ್ಕೂ ಅಧಿಕ ಮಕ್ಕಳು ಮಾನವ ಸರಪಳಿ ನಿರ್ಮಿಸಿ ಗಮನ ಸೆಳೆದರು.

Scanned with CamScanner

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ
15 ನವೆಂಬರ್ 2019 | ಶುಕ್ರವಾರ
15 NOVEMBER 2019
ಪುಟ 14+6

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI > VIJAYAPURA
ಶುಕ್ರವಾರ 15 ನವೆಂಬರ್ 2019
15 NOVEMBER 2019
5

# ಅಖಂಡ ಭಾರತಕ್ಕೆ ಒಂದೇ ಸಂವಿಧಾನ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

» ಡಾ.ಬಿ.ಎಂ. ಕೊರಬು ಹೇಳಿಕೆ

» 'ಒಂದೇ ದೇಶ ಒಂದೇ ಸಂವಿಧಾನ' ಕಾರ್ಯಕ್ರಮ ಉದ್ಘಾಟನೆ

ಸ್ವಾತಂತ್ರ್ಯಾನಂತರ ಭಾರತೀಯರೇ ಸಂವಿಧಾನವನ್ನು ರೂಪಿಸಬೇಕೆಂಬ ನಿರ್ಣಯಿಸಿ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ಬರೆಯಲು ಮುಂದಾದರು. ಇಂದು ಇಡೀ ಪ್ರಪಂಚವೇ ಮೆಚ್ಚುವಂಥ ಸಂವಿಧಾನ ನಮ್ಮದಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ.ಬಿ.ಎಂ. ಕೊರಬು ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ 'ಒಂದೇ ದೇಶ ಒಂದೇ ಸಂವಿಧಾನ' ಎಂಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಾಜಿ ಸೈನಿಕ ಕ್ಯಾಪ್ಟನ್ ಸಂಗಪ್ಪ ದೇಗಿನಾಳ, ಎಸ್.ಬಿ. ಕೆಂಗನಾಳ, ಚಿದಾನಂದ ಬಾವಿಕಟ್ಟಿ ಅವರನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯ ಎ.ಎಸ್. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ವಿದ್ಯಾ ಪಾಟೀಲ, ಉಪನ್ಯಾಸರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ.ರಶ್ಮಿ ಪಾಟೀಲ, ವಿದ್ಯಾರ್ಥಿ ಬಸವರಾಜ ದೊಡ್ಡಮನಿ ನಿರೂಪಿಸಿದರು. ಶಂಕರ ಹುಂಡೇಕಾರ ವಂದಿಸಿದರು.

Scanned with CamScanner